**ಮೆ|| ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂಡಾಧಿಕಾರಿಗಳು, ನರಗುಂದ**

**ಸಿಸಿ ನಂ. 444/2024**

**ಚಾಸಾಃ 3/ಫ್ರಾಸಾಃ 2**

**ದಿನಾಂಕಃ 15-10-2025**

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

| | |
|---|---|
| **ಸಾಕ್ಷಿದಾರರ ಹೆಸರು** | ರಿಯಾಜ ಅನಸಾರಿ |
| ತಂದೆ/ಗಂಡನ ಹೆಸರು | ಚಮನಸಾಬ |
| ವಯಸ್ಸು | 28 ವರ್ಷ |
| ಉದ್ಯೋಗ | ಖಾಸಗಿ ವಾಹನ ಚಾಲಕ |
| ವಾಸ | ನರಗುಂದ |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ**

ಆರೋಪಿತನ ಪರಿಚಯ ಇಲ್ಲ. ಚಾಸಾ-2 ಪರಿಚಯ ಇರುತ್ತದೆ. ಈಗ ಸುಮಾರು 2 ವರ್ಷದ ಹಿಂದೆ ನರಗುಂದ ಪಟ್ಟಣದ ಮಾರುತಿ ನಗರದಲ್ಲಿ ನಾನು ಮತ್ತು ಚಾಸಾ-2 ಕುಳಿತಿದ್ದಾಗ ಪೊಲೀಸರ ಕೋರಿಕೆಯ ಮೇರೆಗೆ ನಿಪಿಃ 1 ಸ್ಥಳ ಪಂಚನಾಮೆಗೆ ಸಹಿ ಮಾಡಿದ್ದು ಅದರಲ್ಲಿ ಬರೆದ ವಿಚಾರ ಗೊತ್ತಿಲ್ಲ. ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಒಂದು ಫೋಟೋ ಪಡೆದಿರುತ್ತಾರೆ. ಸದರಿ ಫೋಟೋವನ್ನು ನಿಪಿಃ2 ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಹಾಗೂ ಯಾವುದೇ ವ್ಯಕ್ತಿಯನ್ನು ವಿಚಾರಣೆ ಮಾಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಪ್ರಾರ್ಥಿಸಿಕೊಂಡರು, ಸದರಿ ಸಾಕ್ಷಿದಾರರು ತಮ್ಮ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದು, ಕಾರಣ ಸದರಿ ಸಾಕ್ಷಿದಾರರನ್ನು ಪಾಟೀ ಸವಾಲು ಮಾಡಲು ಮಾನ್ಯ ಸಸಅ ರವರಿಗೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದ**

ದಿ.04-08-2024 ರಂದು ಸಂಜೆ 7.45 ಗಂಟೆಯ ಸಮಯದಲ್ಲಿ ನಾನು ಮತ್ತು ಚಾಸಾ-2 ರವರನ್ನು ಪೋಲಿಸರು ನರಗುಂದ ಪಟ್ಟಣದ ಮಾರುತಿ ನಗರದ ಕ್ರಾಸ ಹತ್ತಿರ ಕರೆಯಿಸಿರುತ್ತಾರೆ ಎಂದರೆ ಸರಿಯಲ್ಲ. ಆ

ಸಮಯದಲ್ಲಿ ಪೋಲಿಸರು ನಮಗೆ ತಾವು ಕರ್ತವ್ಯದಲ್ಲಿದ್ದಾಗ ಒಬ್ಬ ವ್ಯಕ್ತಿ ತನ್ನ ಇರುವಿಕೆಯನ್ನು ಮರೆಮಾಚಿ ಅಪರಾಧ ಎಸಗುವ ಉದ್ದೇಶದಿಂದ ಸಂಧಿಯಲ್ಲಿ ಓಡಿ ಹೋಗುತ್ತಿದ್ದಾಗ ಸಿಕ್ಕಿದ್ದು ಆತನನ್ನು ಹಿಡಿದಿರುತ್ತೇವೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಪಂಚನಾಮೆ ಸಮಯದಲ್ಲಿ ಹಾಜರು ಇದ್ದು ಸಹಕರಿಸುವಂತೆ ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದಕ್ಕೆ ನಾವು ಒಪ್ಪಿಕೊಂಡು ಅವರೊಂದಿಗೆ ಉಳಿದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಂತರ ಪೋಲಿಸರು ನಮ್ಮ ಸಮಕ್ಷಮ ತಮ್ಮ ವಶದಲ್ಲಿದ್ದ ವ್ಯಕ್ತಿಯನ್ನು ವಿಚಾರಣೆ ಮಾಡಿದಾಗ ಆತ ಸರಿಯಾದ ಉತ್ತರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ವಿಚಾರಣೆ ಸಮಯದಲ್ಲಿ ಆತ ತನ್ನ ಹೆಸರು ಸುರೇಶ ತಂದೆ ಅಡಿವೆಪ್ಪ ಮರಾಠೆ ಸಾಃ ನರಗುಂದ ಎಂದು ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ಆದರೆ ತನ್ನ ಇರುವಿಕೆ ಬಗ್ಗೆ ಸರಿಯಾದ ಉತ್ತರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಕಾರಣ ಪೋಲಿಸರು ಸಂಶಯದ ಮೇಲೆ ಆತನನ್ನು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸ್ಥಳದಲ್ಲಿ ನಮ್ಮ ಸಮಕ್ಷಮ ಸಂಜೆ 7.45 ರಿಂದ 8.15 ರವರೆಗೆ ನಿಪಿಃ1 ರಂತೆ ಸ್ಥಳ ಪಂಚನಾಮೆ ಜರುಗಿಸಿದ್ದಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿಃ 2 ರಂತೆ ಫೋಟೋ ಪಡೆದಿದ್ದಾರೆ ಎಂದರೆ ಸರಿಯಲ್ಲ. ಎಲ್ಲ ವಿಚಾರ ತಿಳಿದು, ನಿಪಿ-1 ದಾಖಲೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈಗ ಆರೋಪಿತರಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ ಎಂದು ತಿಳಿಸಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ .

ಜೆ ಎಂ ಎಫ್ ಸಿ ನರಗುಂದ